3. ವಿಷಯ: ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡುವ NRWSDಯೋಜನೆಯಡಿ ಸ್ವಾಧೀನಪಡಿಸಿಕೊಂಡ ರೈತರ ಜಮೀನಿಗೆ ಪರಿಹಾರ ಧನ ನಿಗದಿ ಮಾಡದಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):–ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡುವ NRWSD ಯೋಜನೆಯಡಿ ಸ್ವಾಧೀನಪಡಿಸಿಕೊಂಡ ರೈತರ ಜಮೀನಿಗೆ ಪರಿಹಾರಧನ ನಿಗದಿ ಮಾಡದಿರುವ ಬಗ್ಗೆ ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ. ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಯವರು, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಕೆರೆಯಿಂದ ಮದಲೂರು ಮಾರ್ಗ ಮಧ್ಯದ ಕೆರೆಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ NRWSDಯೋಜನೆಯಡಿ ಕಾಮಗಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ನಡೆದಿದೆ. ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ ಕಂಇ 48 ಭೂಸ್ವಾತು 2012 ದಿನಾಂಕ: 18–08–2012 ರ ಅನುಸಾರ ಭೂಸ್ವಾಧೀನ ಕಾಯ್ದೆ

ಕಲಂ–6(1)ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಯೋಜನೆಯಿಂದ ಭೂಸ್ವಾಧೀನಗೊಂಡಿರುವ ಸುಮಾರು 285–00 ಎಕರೆ ಜಮೀನಿನ ಭೂಮಾಲೀಕರಿಗೆ ಪರಿಹಾರಧನ ನಿಗದಿಪಡಿಸುವ ಸಂಬಂಧ ಮಾನ್ಯ ಶಾಸಕರು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಮೇರೆಗೆ ಒಪ್ಪಂದದ ಐತೀರ್ಪು ಹೊರಡಿಸುವ ಸಲುವಾಗಿ ದಿನಾಂಕ:· 4–01–2013 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಿ ಭೂಸ್ವಾಧೀನದಿಂದ ಬಾಧಿತರಾದ ರೈತರ ಪರಿಹಾರ ಬೇಡಿಕೆಯನ್ನು ಪಡೆಯಲಾಗಿದೆ. ಸದರಿ ಜಮೀನುಗಳ ಸ್ಥಳ ತನಿಖೆಯ ನಂತರ ಈ ಬಗ್ಗೆ ಶೀಘ್ರದಲ್ಲಿಯೇ ಕ್ರಮ ವಹಿಸಲಾಗುವುದು ಏನಾದರು ಕ್ಲಾರಿಫಿಕೇಷನ್ ಇದ್ದರೆ ಕೇಳಲಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಿಗಿಸಿಕೊಟ್ಟಿದ್ದಾರೆ. ಇದು ಕುಡಿಯುವ ನೀರಿನ ಯೋಜನೆ ಆಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ 60 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದು, ಈಗ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಅಲ್ಲಿ ರೈತರು voluntaryಯಾಗಿ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ. ಆದರೆ, ನಿಮ್ಮ ಪ್ರೊಸೀಜರ್ ಪ್ರಕಾರ ಭೂಮಿಯನ್ನು ಸ್ವಾಧೀನ ಮಾಡಿ ಅದಕ್ಕೆ ಪರಿಹಾರಧನ ಕೊಡುವುದರಲ್ಲಿ ವಿಳಂಬವಾಗುತ್ತಿದೆ ಎನ್ನತಕ್ಕಂಥದು ನಮ್ಮ ಪ್ರಶ್ನೆಯಾಗಿದೆ. 285 ಎಕರೆಗೆ 6(1)ಆಗಿದೆ. ಮತ್ತೆ ಇನ್ನೂ 100

ಎಕರೆಗೆ 4(1) ಆಗಬೇಕಾಗಿತ್ತು. ಆದರೆ, ಒಂದು ವರ್ಷದಿಂದ ಈ ಕೆಲಸ ಆಗಿಲ್ಲ. ಈಗಾಗಲೇ ಅಷ್ಟು ಭೂಮಿಯನ್ನು ಕೂಡ ಅಲ್ಲಿನ ರೈತರು ಬಿಟ್ಟುಕೊಟ್ಟಿದ್ದಾರೆ. ಬಹುಶಃ ಇಡೀ ರಾಜ್ಯದಲ್ಲಿ ಯಾವುದೇ ಯೋಜನೆಗೆ ರೈತರುvoluntarty ಆಗಿ ಬಿಟ್ಟುಕೊಂಡಿರುವ ಪ್ರಸಂಗಗಳು ಇದುವರೆಗೂ ಆಗಿಲ್ಲ. ಬಿಟ್ಟುಕೊಟ್ಟಿರುವ ರೈತರು ಅದಕ್ಕೆ consentಕೊಡುವುದಕ್ಕೂ ಸಹ ತಯಾರಾಗಿದ್ದಾರೆ. ಇದಕ್ಕೆ ಹಣ ಬಿಡುಗಡೆ ಮಾಡಬೇಕಾಗಿದೆ. ಈಗಾಗಲೇ ಕುಡಿಯುವ ನೀರಿನ ಯೋಜನೆಗಾಗಿ ಹಣ ಬಿಡುಗಡೆ ಮಾಡುವುದಕ್ಕಾಗಿ 5 ಕೋಟಿ ರೂಪಾಯಿಯನ್ನು Assistant Commissioner ಹತ್ತಿರ depositಸಹ ಮಾಡಿದ್ದಾರೆ. ಆದರೆ, ಈ ಬಗ್ಗೆ ಇಲ್ಲಿಯವರೆಗೆ ಅತಿಮವಾದಂಥ ತೀರ್ಮಾನವಾಗಿಲ್ಲ. Assistant Commissioner, Tahasildar, Deputy Commissionerಹಂತದಲ್ಲಿ ಅನಗತ್ಯವಾದಂಥ ವಿಳಂಬ ಇವತ್ತಿನದಿವಸ ಆಗುತ್ತಿದೆ. ದಯಮಾಡಿ ಇದಕ್ಕೆ ಸ್ವಲ್ಪ ತಾಕೀತು ಮಾಡಿ. ಈಗಾಗಲೇ ಇದಕ್ಕಾಗಿ ಹಣ ಇದೆ. ಸರ್ಕಾರ ಇದಕ್ಕೆ ಅತಿಮವಾಗಿ ಅನುಮತಿಯನ್ನು ಕೊಟ್ಟು ಇನ್ನು 15–20 ದಿವಸದಲ್ಲಿ ಹಣ ಕೊಡುತ್ತೇವೆಂದು ಹೇಳಿದರೆ ಅಲ್ಲಿನ ರೈತರು ಧನ್ಯರಾಗುತ್ತಾರೆ. ಈಗಾಗಲೇ ರೈತರು ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ. ಇದಕ್ಕಾಗಿ ದುಡ್ಡಿದೆ. ಆದರೆ, ದುಡ್ಡು ಕೊಡುತ್ತಿಲ್ಲ.

ಶ್ರಿ ಕೆ.ಎಸ್.ಈಶ್ವರಪ್ಪ:–ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಚಂದ್ರರವರು ಹೇಳುತ್ತಿರುವುದು ಸರಿಯಾಗಿದೆ. ಮೊನ್ನೆದಿವಸ ಈ ಬಗ್ಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡ ಆಗಿದೆ. ಆ ಜಮೀನಿನ ಸ್ಥಳದ ಬಗ್ಗೆ ತನಿಖೆ ಮಾಡಿ ಇನ್ನು ಒಂದು ತಿಂಗಳಲ್ಲಿ ಆ ಸಮಸ್ಯೆಯನ್ನು ಪರಿಹಾರ ಮಾಡಿಕೊಡುತ್ತೇವೆ.

ಅಧ್ಯಕ್ಷರು:– ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು ಇಲ್ಲ. ಮತ್ತೆ ಡಾ: ಸಾರ್ವಭೌಮ ಬಗಲಿಯವರು ಸಹ ಇಲ್ಲ. ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಆದ್ದರಿಂದ, ನಾಳೆ ತೆಗೆದುಕೊಳ್ಳುತ್ತೇನೆ.

4. ವಿಷಯ:– ಸಿಂಧನೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಐ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ನಿರ್ಮಾಣ ಮಾಡುತ್ತಿರುವ ಮನೆಗಳ ಕಾಮಗಾರಿಯು ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ(ಸಿಂಧನೂರು):– ಮಾನ್ಯ ಅಧ್ಯಕ್ಷರೆ, ಸಿಂಧನೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಐ.ಹೆಚ್.ಎಸ್.ಡಿ.ಸಿ. ಯೋಜನೆಯಡಿ ನಿರ್ಮಾಣ ಮಾಡುತ್ತಿರುವ ಮನೆಗಳ ಕಾಮಗಾರಿಯು ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ವಸತಿ ಸಚಿವರ ಗಮನ ಸೆಳೆಯುತ್ತೇನೆ.